# ಎಲೆ ಜಿಹ್ವೆ ನೀ ಕೇಶವನ ನಾಮವನೆ ಸ್ತುತಿಸು

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 35.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 201.
3. **Note:** This song is not available in the books of Sri. Pavanje Guru Rao and also in the books of Prof. S.K. Ramachandra Rao

ಎಲೆ ಜಿಹ್ವೆ ನೀ ಕೇಶವನ ನಾಮವನೆ ಸ್ತುತಿಸು

ಎಲೆ ಕರಗಳಿರ, ಶ್ರೀ ಹರಿಯ ಪೂಜೆಯ ಮಾಡಿ

ಎಲೆ ನೇತ್ರಗಳಿರ, ಶ್ರೀ ಕೃಷ್ಣನ ಮೂರ್ತಿಗಳ ನೋಡಿ

ಎಲೆ ಕಾಲುಗಳಿರ, ಶ್ರೀ ಹರಿಯ ಯಾತ್ರೆಯ ಮಾಡಿ

ಎಲೆ ನಾಸಿಕವೆ, ಮುಕುಂದನ ಚರಣ ಪರಿಮಳವನಾಘ್ರಾಣಿಸುತಿರು

ಎಲೆ ಶಿರವೆ, ನೀನಧೋಕ್ಷಜನ ಪಾದ ಜಲರುಹದಲ್ಲಿ ಎರಗಿರು

ಎಲೆ ಮನವೆ, ನೀ ವರದ ಕೇಶವ ಪುರಂದರ ವಿಠಲನ

ಭಕುತಿ ವಿಷಯಗಳಲ್ಲಿ ಅನುದಿನವು ಕಳೆಯುತ್ತಿರು

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಭಕ್ತನ ಅಂಗಾಂಗಗಳೂ ಪರಮಾತ್ಮನ ಕಾರ್ಯಕ್ಕಾಗಿಯೇ ದುಡಿಯುತ್ತಿರಬೇಕೆಂಬುದನ್ನು ಈ ಉಗಾಭೋಗವು ಹೇಳುತ್ತಿದೆ

**Classification:** Ugabhoga
**Ankita:** purandara vittala
**Location:** NA
**Category:** Sankeerna

**Sub-Category:** nalige, keshava, kai, Krishna, puje, kannu, mukunda, padma, mana, dina,

**Pravachana:** NA

**Explanation:** NA